
# ಬ್ಯಾಂಕು ಗ್ರಾಹಕರ ಹಕ್ಕುಗಳು




Banking Codes and Standards Board of India
ಬ್ಯಾಂಕಿಂಗ್ ಕೋಡ್ಸ್ ಎಂಡ್ ಸ್ಟ್ಯಾಂಡರ್ಡ್ಸ್ ಬೋರ್ಡ್ ಆಫ್ ಇಂಡಿಯಾ

RBL BANK
apno ka bank

BANKING CODES AND STANDARDS BOARD OF INDIA
www.bcsbi.org.in



ನಲ್ಮೆಯ ಓದುಗರೇ,

“ಬ್ಯಾಂಕು ಗ್ರಾಹಕರುಗಳ ಹಕ್ಕುಗಳು” ಚಿತ್ರಣ ರೂಪಿತ ಕೈಪಿಡಿಯನ್ನು ನಿಮ್ಮ ಮುಂದೆ ಸಾದರಪಡಿಸಲು ಹರ್ಷಪಡುತ್ತೇನೆ. ಬ್ಯಾಂಕಿಂಗ್ ಸೇವೆಗಳು ಮತ್ತು ಗ್ರಾಹಕರುಗಳ ಹಕ್ಕುಗಳ ಬಗ್ಗೆ ಜಾಗರೂಕತೆ ಮೂಡಿಸುವ ನಿಟ್ಟಿನಲ್ಲಿ ಇದೊಂದು ಬಿಸಿಎಸ್‌ಬಿಐನ ಒಂದು ಸಣ್ಣ ಪ್ರಯತ್ನವಾಗಿದೆ. ಪ್ರಧಾನಮಂತ್ರಿ ಜನಧನ್ ಯೋಜನೆಯಡಿ ಈವರೆಗೆ 25 ಕೋಟಿ ಬ್ಯಾಂಕು ಖಾತೆಗಳನ್ನು ತೆರೆಯಲಾಗಿದೆ. ಬ್ಯಾಂಕುಗಳು ಒದಗಿಸುವ ವಿವಿಧ ಸೇವೆಗಳ ಬಗ್ಗೆ ಅರಿತುಕೊಳ್ಳುವುದು ಗ್ರಾಹಕರಿಗೆ ಬಹು ಮುಖ್ಯವಾಗಿದೆ.

ಎಟಿಎಂ, ಇಂಟರ್‌ನೆಟ್ ಬ್ಯಾಂಕಿಂಗ್ ಮುಂತಾದ ಅತ್ಯಾಧುನಿಕ ತಾಂತ್ರಿಕ ಬೆಳವಣಿಗೆಗಳಿಂದ ಬ್ಯಾಂಕ್ ವ್ಯವಹಾರ ಸರಳಗೊಂಡಿದ್ದರೂ, ಅದೇ ರೀತಿ ಅಪಾಯ ಮತ್ತು ವಂಚನೆಗೆ ಈಡಾಗುವ ಸಂದರ್ಭವೂ ಅಧಿಕವಾಗಿದೆ. ಈ ಬಗ್ಗೆ ಗ್ರಾಹಕರು ವಂಚನೆಗೆ ಒಳಪಡುವ ಬಗ್ಗೆ ಜಾಗರೂಕರಾಗುವುದು ಅನಿವಾರ್ಯವಾಗಿದೆ.

ಈ ದೃಷ್ಟಿಯಲ್ಲಿ ಚಿತ್ರಣ ರೂಪದ ಕೈಪಿಡಿಯನ್ನು ಮುದ್ರಿಸಲಾಗಿದೆ. ಈ ಕೈಪಿಡಿಯು ಓದುಗರಿಗೆ ಬಹಳ ಉಪಯೋಗಕರವಾಗಿದ್ದು, ಸದಸ್ಯ ಬ್ಯಾಂಕುಗಳು ತಮ್ಮ ವಿತ್ತೀಯ ಸೇರ್ಪಡೆ ಕಾರ್ಯಕ್ರಮದಡಿ ಪ್ರಚುರಪಡಿಸುವರೆಂದು ಭಾವಿಸುವೆನು.

(ಎ.ಸಿ. ಮಹಾಜನ್)
ಅಧ್ಯಕ್ಷರು
ಬ್ಯಾಂಕಿಂಗ್ ಕೋಡ್ಸ್ ಎಂಡ್ ಸ್ಟ್ಯಾಂಡರ್ಡ್ಸ್ ಬೋರ್ಡ್ ಆಫ್ ಇಂಡಿಯಾ

ಅಕ್ಟೋಬರ್ 17, 2016

ಸಿ–7, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಬಿಲ್ಡಿಂಗ್, 4ನೇ ಮಹಡಿ, ಬಾಂದ್ರಾ–ಕುರ್ಲಾ ಕಾಂಪ್ಲೆಕ್ಸ್, ಮುಂಬಯಿ-400 051.
ದೂರವಾಣಿ: (022) 2657 8100 ಎಕ್ಸ್‌ಟೆನ್ಷನ್: 7410/7622, ಫ್ಯಾಕ್ಸ್: (022) 2657 3719, help.bcsbi@rbi.org.in

# ವಿಷಯ ಸೂಚಿ



1. ಮೂಲ ಉಳಿತಾಯ ಬ್ಯಾಂಕ್ ಠೇವಣಿ (BSBD) – ಸಣ್ಣ ಖಾತೆ ತೆರೆಯುವುದು ಬಹಳ ಸುಲಭ.
2. ಠೇವಣಿ ಖಾತೆಗಳ ವಿಶೇಷ ಷರತ್ತುಗಳು.
3. ಉಳಿತಾಯ ಬ್ಯಾಂಕ್ ಖಾತೆಯಲ್ಲಿ ಕನಿಷ್ಠ ಬ್ಯಾಲೆನ್ಸ್ ಸ್ಥಿತಿ.
4. ಠೇವಣಿ ಖಾತೆಗಳಲ್ಲಿ ನಾಮಾಂಕನ.
5. ಉಳಿತಾಯ ಬ್ಯಾಂಕ್ ಖಾತೆಯಲ್ಲಿ ಚೆಕ್ ಡಿಪಾಸಿಟ್.
6. ಸುಪ್ತವಾದ / ನಿಷ್ಕ್ರಿಯವಾಗಿಲ್ಲದ ಖಾತೆಗಳನ್ನು ಸಕ್ರಿಯಗೊಳಿಸುವುದು.
7. ಬ್ಯಾಂಕಿನಲ್ಲಿ ಹರಿದ / ಕೊಳೆಯಾದ ನೋಟುಗಳ ವಿನಿಮಯ ಮಾಡುವುದು.
8. ನಿರಖು ಠೇವಣಿಗಳ ಅವಧಿ ಪೂರ್ವ ನಗದೀಕರಣ ಅಥವಾ ನಿರಖು ಠೇವಣಿಗಳ ಮೇಲೆ ಸಾಲ.
9. ಒಂದು ವೇಳೆ ಖಾತೆದಾರರ ಮರಣ ಸಂಭವಿಸಿದಲ್ಲಿ ಪೂರ್ವಾವಧಿಯಲ್ಲಿ ನಿರಖು ಠೇವಣಿಯನ್ನು ಹಿಂತೆಗೆಯುವುದು.
10. ಮರಣ ಹೊಂದಿದ ಖಾತೆದಾರರ ಕ್ಲೇಮುಗಳ ಇತ್ಯರ್ಥ.
11. ಮೂಲ ಉಳಿತಾಯ ಬ್ಯಾಂಕ್ ಠೇವಣಿ (BSBD) ಖಾತೆಯೊಂದಿಗೆ ರುಪೇ ಕಾರ್ಡ್ ನೀಡಿಕೆ.
12. ಖಾತೆಯಿಂದ ಡೆಬಿಟ್ ಆದ ಬಗ್ಗೆ ಎಸ್‌ಎಂಎಸ್ ಸ್ವೀಕೃತಿಯಾದರೂ, ಎಟಿಎಂನಿಂದ ನಗದು ವರ್ಗಾವಣೆಗೊಳ್ಳದಿರುವುದು.
13. ಡೆಬಿಟ್/ರುಪೇ ಕಾರ್ಡು ಕಳೆದು ಹೋದ ಬಗ್ಗೆ ಬ್ಯಾಂಕಿಗೆ ಮಾಹಿತಿ ನೀಡುವುದು.
14. ಬ್ಯಾಂಕ್ ಅಂತರ್ಗತ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹಣ ವರ್ಗಾವಣೆ.
15. ದೂರು ನೀಡುವಿಕೆ / ಗ್ರಾಹಕರ ಕುಂದುಕೊರತೆ ನಿವಾರಣೆಯ ಕಾರ್ಯವಿಧಾನ.
16. ಹಿರಿಯ ನಾಗರಿಕರು/ಅಂಗವಿಕಲರಿಗೆ ಏಕಕಿಂಡಿ ಸೌಲಭ್ಯ.
17. ಖಾಸಗಿತನ ಮತ್ತು ಗೌಪ್ಯತೆಯ ಹಕ್ಕು.
18. ಗ್ರಾಹಕರಿಗೆ ವಿಮಾ ಪಾಲಿಸಿಯ ತಪ್ಪು ಮಾಹಿತಿ ಕೊಟ್ಟು ಮಾರಾಟ.
19. ಬ್ಯಾಂಕಿಂಗ್ ವಲಯದ ಬಿಸಿನೆಸ್ ಕರೆಸ್ಪಾಂಡೆಂಟ್/ಫೆಸಿಲಿಟೇಟರ್‌ಗಳಿಂದ ಸಹಾಯಹಸ್ತ ಪಡೆಯುವುದು.

## 1. ಮೂಲ ಉಳಿತಾಯ ಬ್ಯಾಂಕ್ ಠೇವಣಿ (BSBD) - ಸಣ್ಣ ಖಾತೆ ತೆರೆಯುವುದು ಬಹಳ ಸುಲಭ





**ಸೂಚನೆ: BSBD - ಸಣ್ಣ ಖಾತೆಯನ್ನು ನಿಮ್ಮ ಫೋಟೊ ಮತ್ತು ಸಹಿ ಅಥವಾ ಹೆಬ್ಬೆಟ್ಟು ಫಾರ್ಮ್‌ಲ್ಲಿ ಒತ್ತುವುದರ ಮೂಲಕ ಆದರೆ ಇಲ್ಲಿ ಒಂದು ತಿಂಗಳಲ್ಲಿ ತೆಗೆಯಬಹುದಾದ ಹಣ ಮತ್ತು ಎಷ್ಟು ಬಾರಿ ಎಂಬುದರ ಬಗ್ಗೆ ಕೆಲವು ಷರತ್ತುಗಳಿವೆ.**

## 2. ಠೇವಣಿ ಖಾತೆಗಳ ವಿಶೇಷ ಷರತ್ತುಗಳು





**ಸೂಚನೆ: ಡಿಪಾಸಿಟ್ ಖಾತೆ ತೆರೆಯುವಾಗ ವಿಶೇಷ ಷರತ್ತುಗಳ ಬಗ್ಗೆ ಗ್ರಾಹಕರಿಗೆ ತಿಳಿಸುವುದು ಬ್ಯಾಂಕುಗಳಿಗೆ ಬಹು ಮುಖ್ಯವಾಗಿದೆ.**

## 3. ಉಳಿತಾಯ ಬ್ಯಾಂಕ್ ಖಾತೆಯಲ್ಲಿ ಕನಿಷ್ಠ ಬ್ಯಾಲೆನ್ಸ್ ಸ್ಥಿತಿ





**ಸೂಚನೆ: ಬಿಎಸ್‌ಬಿಡಿ ಖಾತೆಯಲ್ಲಿ ಬ್ಯಾಲೆನ್ಸ್ ಇಲ್ಲದಿದ್ದಲ್ಲಿ, ಯಾವುದೇ ದಂಡವಿಲ್ಲದೇ ಖಾತೆ ಚಾಲ್ತಿಯಿರುವುದು.**

## 4. ಠೇವಣಿ ಖಾತೆಗಳಲ್ಲಿ ನಾಮಾಂಕನ




**ಸೂಚನೆ: ಉಳಿತಾಯ ಬ್ಯಾಂಕ್ ಖಾತೆ/ಫಿಕ್ಸೆಡ್ ಠೇವಣಿಗಳಿಗೆ ನಾಮಾಂಕನ ಮಾಡುವುದರಿಂದ ಖಾತಾದಾರರ ಮರಣಾನಂತರ ನಾಮಾಂಕಿತರಿಗೆ ಮುಂದೆ ಬ್ಯಾಂಕಿನಿಂದ ಹಣ ತೆಗೆಯಲು ಯಾವುದೇ ಸಮಸ್ಯೆ ಉಂಟಾಗದು.**

## 5. ಉಳಿತಾಯ ಬ್ಯಾಂಕ್ ಖಾತೆಯಲ್ಲಿ ಚೆಕ್ ಡಿಪಾಸಿಟ್





**ಸೂಚನೆ: ಚೆಕ್‌ನ್ನು ಡಿಪಾಸಿಟ್ ಮಾಡುವಾಗ ಅಥವಾ ಕೌಂಟರ್‌ನಲ್ಲಿ ಹಾಜರುಪಡಿಸುವಾಗ ಚೆಕ್‌ನ ಹಿಂದುಗಡೆ ನಿಮ್ಮ ಖಾತೆ ನಂಬ್ರ ಮತ್ತು ಮೊಬೈಲ್ ನಂಬ್ರವನ್ನು ಕಡ್ಡಾಯವಾಗಿ ಬರೆಯಿರಿ.**

## 6. ಸುಪ್ತವಾದ / ನಿಷ್ಕ್ರಿಯವಾಗಿಲ್ಲದ ಖಾತೆಗಳನ್ನು ಸಕ್ರಿಯಗೊಳಿಸುವುದು





**ಸೂಚನೆ: ಬ್ಯಾಂಕ್ ನಿಷ್ಫಲಗೊಂಡ ನಿಮ್ಮ ಖಾತೆಯನ್ನು ಸಕ್ರಿಯಗೊಳಿಸಲು ಯಾವುದೇ ಶುಲ್ಕ ವಿಧಿಸುವುದಿಲ್ಲ.**

## 7. ಬ್ಯಾಂಕಿನಲ್ಲಿ ಹರಿದ / ಕೊಳೆಯಾದ ನೋಟುಗಳ ವಿನಿಮಯ ಮಾಡುವುದು





**ಸೂಚನೆ: ನಿಮ್ಮ ಹರಿದ/ಕೊಳೆಯಾದ ನೋಟನ್ನು ವಿನಿಮಯ ಮಾಡಿಕೊಳ್ಳಲು ಯಾವುದೇ ಬ್ಯಾಂಕಿನ ಯಾವುದೇ ಶಾಖೆಯನ್ನು ಸಂದರ್ಶಿಸಬಹುದು.**

## 8. ನಿರಖು ಠೇವಣಿಗಳ ಅವಧಿ ಪೂರ್ವ ನಗದೀಕರಣ ಅಥವಾ ನಿರಖು ಠೇವಣಿಗಳ ಮೇಲೆ ಸಾಲ





**ಸೂಚನೆ: ಮೆಚ್ಯುರಿಟಿ ಅವಧಿ ಮೊದಲೇ ಫಿಕ್ಸೆಡ್ ಠೇವಣಿ ಮುಚ್ಚಬಹುದು ಅಥವಾ ಅದರ ಮೇಲೆ ಸಾಲ ಪಡಕೊಳ್ಳಬಹುದು.**

## 9. ಒಂದು ವೇಳೆ ಖಾತೆದಾರರ ಮರಣ ಸಂಭವಿಸಿದಲ್ಲಿ ಪೂರ್ವಾವಧಿಯಲ್ಲಿ ನಿರಖು ಠೇವಣಿ ಕೊನೆಗೊಳಿಸುವುದು.





**ಸೂಚನೆ: ಠೇವಣಿದಾರನ ಮರಣ ಸಂಭವಿಸಿದಲ್ಲಿ, ಫಿಕ್ಸೆಡ್ ಡಿಪಾಸಿಟ್ ಹಣವನ್ನು ಪರಿಪಕ್ವತೆಯ ಮೊದಲು ನಾಮಾಂಕನ ಮಾಡಿರುವ ವ್ಯಕ್ತಿಗೆ ಪಾವತಿಸಬಹುದಾಗಿದೆ. ಅಂತಹ ಸಂದರ್ಭದಲ್ಲಿ ದಂಡ ವಿಧಿಸಲಾಗುವುದಿಲ್ಲ.**

## 10. ಮರಣ ಹೊಂದಿದ ಖಾತೆದಾರರ ಕ್ಲೇಮುಗಳ ಇತ್ಯರ್ಥ




**ಸೂಚನೆ: ಒಂದು ವೇಳೆ ಠೇವಣಿ ಖಾತೆಗೆ ಕೆಲವು ಮಿತಿಯೊಳಗೆ ನಾಮಾಂಕನವಿಲ್ಲದಿದ್ದಲ್ಲಿ, ಆಗ ಠೇವಣಿದಾರರ ಉತ್ತರಾಧಿಕಾರಿಯವರು ಮರಣ ದೃಢೀಕರಣ ಪತ್ರ, ಕ್ಲೇಮುದಾರರ ಪರಿಚಯ ಪತ್ರ ಮತ್ತು ಅಫಿದಾವಿತ್‌ನ್ನು ಬ್ಯಾಂಕ್‌ಗೆ ಸಲ್ಲಿಸಬೇಕು. ಕ್ಲೈಮು ಸಲ್ಲಿಸಿದ 15 ದಿನಗಳೊಳಗೆ ಡಿಪಾಸಿಟ್ ಹಣವನ್ನು ಬ್ಯಾಂಕು ಪಾವತಿಸಬೇಕು.**

## 11. ಮೂಲ ಉಳಿತಾಯ ಬ್ಯಾಂಕ್ ಠೇವಣಿ (BSBD) ಖಾತೆಯೊಂದಿಗೆ ರುಪೇ ಕಾರ್ಡ್ ನೀಡಿಕೆ





**ಸೂಚನೆ: ನಿಮ್ಮ ಉಳಿತಾಯ ಬ್ಯಾಂಕ್ ಖಾತೆಯೊಂದಿಗೆ ರುಪೇ ಕಾರ್ಡ್ ಕೊಂಡೊಯ್ಯಿರಿ. ಆದರೆ ಎಂದಿಗೂ ಯಾರಿಗೂ ನಿಮ್ಮ ರುಪೇ ಕಾರ್ಡ್ ನಂಬ್ರ ಅಥವಾ ಪಿನ್ ತಿಳಿಸಬೇಡಿ.**

## 12. ಖಾತೆಯಿಂದ ಡೆಬಿಟ್ ಆದ ಬಗ್ಗೆ ಎಸ್‌ಎಂಎಸ್ ಸ್ವೀಕೃತಿಯಾದರೂ, ಎಟಿಎಂನಿಂದ ನಗದು ವರ್ಗಾವಣೆಗೊಳ್ಳದಿರುವುದು





**ಸೂಚನೆ: ನಿಮ್ಮ ಉಳಿತಾಯ ಬ್ಯಾಂಕ್ ಖಾತೆಯಿಂದ ಹಣ ಡೆಬಿಟ್ ಆದ ಬಗ್ಗೆ ಎಸ್‌ಎಂಎಸ್ ಬಂದಲ್ಲಿ, ಆದರೆ ಎಟಿಎಂನಿಂದ ನಗದು ಸಿಗದಿದ್ದಲ್ಲಿ ಅಥವಾ ಕಡಿಮೆ ಸಿಕ್ಕಿದ್ದಲ್ಲಿ, ತಕ್ಷಣ ನಿಮ್ಮ ಬ್ಯಾಂಕಿನ ಟಾಲ್‌ಫ್ರೀ ನಂಬರಿಗೆ ಕರೆ ಮಾಡಿರಿ ಅಥವಾ ಬ್ಯಾಂಕ್ ಶಾಖೆಗೆ ದೂರು ನೀಡಿ.**

# 13. ಡೆಬಿಟ್/ರುಪೇ ಕಾರ್ಡು ಕಳೆದು ಹೋದ ಬಗ್ಗೆ ಬ್ಯಾಂಕಿಗೆ ಮಾಹಿತಿ ನೀಡುವುದು.





**ಸೂಚನೆ: ಒಂದು ವೇಳೆ ನಿಮ್ಮ ಡೆಬಿಟ್ ಕಾರ್ಡ್/ರುಪೇ ಕಾರ್ಡ್ ಕಳೆದು ಹೋದಲ್ಲಿ ಕೂಡಲೇ ಬ್ಯಾಂಕ್‌ನ ಟಾಲ್‌ಫ್ರೀ ನಂಬ್ರಕ್ಕೆ ಸಂಪರ್ಕಿಸಿರಿ ಮತ್ತು ನಿಮ್ಮ ಕಾರ್ಡ್‌ನ್ನು ಬ್ಲಾಕ್ ಮಾಡಿಸಿ ಇದರಿಂದ ನಿಮ್ಮ ಕಾರ್ಡ್ ದುರ್ಬಳಕೆಗೊಳ್ಳುವುದನ್ನು ತಡೆಯಬಹುದು.**

## 14. ಬ್ಯಾಂಕ್ ಅಂತರ್ಗತ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹಣ ವರ್ಗಾವಣೆ





ಸೂಚನೆ: ಕ್ಷಣಾರ್ಧದಲ್ಲಿ ನಿಮ್ಮ ಬ್ಯಾಂಕಿನಿಂದ ಅದೇ ಬ್ಯಾಂಕ್ ಖಾತೆಯಿರುವ ಗ್ರಾಹಕರ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸಬಹುದು.

## 15. ದೂರು ನೀಡುವಿಕೆ / ಗ್ರಾಹಕರ ಕುಂದುಕೊರತೆ ನಿವಾರಣೆಯ ಕಾರ್ಯವಿಧಾನ.













### ಕುಂದುಕೊರತೆ ನಿವಾರಣಾ ವ್ಯವಸ್ಥೆ

ನೀವು ಶಾಖೆಯಲ್ಲಿ ಯಾವುದೇ ದೂರು ದಾಖಲಿಸಲು ಇಚ್ಛಿಸಿದಲ್ಲಿ ಕೆಳಕಂಡ ಶಾಖಾ ಪ್ರಬಂಧಕರನ್ನು ಸಂಪರ್ಕಿಸಿರಿ:

ಶ್ರೀ ..................................
ವಿಳಾಸ ..................................
ಈ–ಮೇಲ್ ..................................

ಒಂದು ವೇಳೆ ನಿಮ್ಮ ದೂರನ್ನು ಬಗೆಹರಿಸದಿದ್ದಲ್ಲಿ ಅಥವಾ ಶಾಖಾ ಪ್ರಬಂಧಕರ ನಿರ್ಣಯವು ನಿಮಗೆ ತೃಪ್ತಿಕರವಾಗದಿದ್ದಲ್ಲಿ ಕೆಳಕಾಣಿಸಿದ ಪ್ರಾದೇಶಿಕ ಪ್ರಬಂಧಕರು/ವಲಯ ಪ್ರಬಂಧಕರು/ಪ್ರಧಾನ ನೋಡಲ್ ಅಧಿಕಾರಿಯನ್ನು ಸಂಪರ್ಕಿಸಬಹುದು.

ಶ್ರೀ ..................................
ವಿಳಾಸ ..................................
ದೂರವಾಣಿ ಸಂಖ್ಯೆ ..................................
ಈ–ಮೇಲ್ ..................................


ಒಂದು ವೇಳೆ ನಿಮ್ಮ ದೂರನ್ನು 30 ದಿನಗಳೊಳಗಾಗಿ ಬಗೆಹರಿಸದಿದ್ದಲ್ಲಿ ಅಥವಾ ಈ ಬಗ್ಗೆ ಬ್ಯಾಂಕಿನ ಉತ್ತರದಿಂದ ತೃಪ್ತಿ ಹೊಂದದಿದ್ದಲ್ಲಿ ಈ ಕೆಳಕಂಡ ವಿಳಾಸದಲ್ಲಿ ಬ್ಯಾಂಕಿನ ಮೇಲ್ವಿಚಾರಕರನ್ನು ಸಂಪರ್ಕಿಸಬಹುದು.

ಬ್ಯಾಂಕಿನ ಮೇಲ್ವಿಚಾರಕರು : ಶ್ರೀ ..................................
ವಿಳಾಸ ..................................
ದೂರವಾಣಿ ಸಂಖ್ಯೆ ..................................
ಈ–ಮೇಲ್ ..................................





**ಸೂಚನೆ: ಒಂದು ವೇಳೆ ನಿಮ್ಗೆ ಬ್ಯಾಂಕ್ ಸೇವೆಯಲ್ಲಿ ತೃಪ್ತಿಯಿಲ್ಲದಿದ್ದಲ್ಲಿ, ದಯವಿಟ್ಟು ಶಾಖಾ ಪ್ರಬಂಧಕರನ್ನು ಸಂಪರ್ಕಿಸಿ ಅಥವಾ ಬ್ಯಾಂಕ್‌ನ ಟಾಲ್‌ಫ್ರೀ ನಂಬ್ರಕ್ಕೆ ಕರೆ ಮಾಡಿ.**

## 16. ಹಿರಿಯ ನಾಗರೀಕರು/ಅಂಗವಿಕಲರಿಗೆ ಏಕಕಿಂಡಿ ಸೌಲಭ್ಯ





**ಸೂಚನೆ: ಬ್ಯಾಂಕುಗಳು ಹಿರಿಯ ನಾಗರೀಕರು/ಅಂಗವಿಕಲರಿಗೆ ಏಕಕಿಂಡಿ ಸೌಲಭ್ಯ ನೀಡುವುದು ಅಗತ್ಯ.**

# 17. ಖಾಸಗಿತನ ಮತ್ತು ಗೌಪ್ಯತೆಯ ಹಕ್ಕು





**ಸೂಚನೆ: ಬ್ಯಾಂಕ್ ತನ್ನ ಗ್ರಾಹಕರುಗಳ ಡಿಪಾಸಿಟ್ ಖಾತೆ, ಸಾಲ ಖಾತೆ ಇತ್ಯಾದಿ ಮಾಹಿತಿಗಳನ್ನು ಯಾರೊಂದಿಗೂ ಅಥವಾ ಅವರ ಕುಟುಂಬದ ಸದಸ್ಯರೊಂದಿಗೂ ಹಂಚಿಕೊಳ್ಳದು.**

## 18. ಗ್ರಾಹಕರಿಗೆ ವಿಮಾ ಪಾಲಿಸಿಯ ಬಗ್ಗೆ ತಪ್ಪು ಮಾಹಿತಿ




**ಸೂಚನೆ: ನೀವು ತಿಳ್ಕೊಂಡ ಠೇವಣಿ / ಸ್ಕೀಮುಗಳಲ್ಲಿ ನಿಮ್ಮ ಹಣ ಡಿಪಾಸಿಟ್ ಮಾಡಿರಿ. ಬಂಡವಾಳ ಹೂಡಿಕೆ ಮಾರುಕಟ್ಟೆಯ ಅಪಾಯ ಮತ್ತು ಹಲವಾರು ಷರತ್ತು ನಿಯಮಾವಳಿಗಳನ್ನು ಹೊಂದಿದ್ದು ನಿಮಗೆ ಇದರ ಜ್ಞಾನವಿದ್ದಲ್ಲಿ ವಿಮಾ ಪಾಲಿಸಿ ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ನಿಮ್ಮ ಹಣ ಹೂಡಿರಿ.**

## 19. ಬ್ಯಾಂಕಿಂಗ್ ವಲಯದ ಬಿಸಿನೆಸ್ ಕರೆಸ್ಪಾಂಡೆಂಟ್ / ಫೆಸಿಲಿಟೇಟರ್‌ಗಳಿಂದ ಸಹಾಯಹಸ್ತ ಪಡೆಯುವುದು.




**ಸೂಚನೆ: ಬ್ಯಾಂಕಿಂಗ್ ಸೌಕರ್ಯಗಳು ಇಲ್ಲದೆಡೆ ಬಿಸಿನೆಸ್ ಕರೆಸ್ಪಾಂಡೆಂಟ್ ಅಥವಾ ಫೆಸಿಲಿಟೇಟರ್‌ಗಳು ಅಂತಹ ಸ್ಥಳಗಳಲ್ಲಿ ಸೇವೆ ಸಲ್ಲಿಸುವರು.**

# ಗ್ರಾಹಕರಿಗೆ ಮುಖ್ಯವಾದ ಸೂಚನೆಗಳು

1. ಮೂಲ ಉಳಿತಾಯ ಬ್ಯಾಂಕು ಠೇವಣಿ ಆರಂಭಿಸುವುದು – ಚಿಕ್ಕ ಖಾತೆ, ಅತೀ ಸರಳ.
2. ಠೇವಣಿ ಖಾತೆ ಆರಂಭಿಸುವ ಮುನ್ನ ಅದರಲ್ಲಿರುವ ವಿಶೇಷ ಷರತ್ತುಗಳನ್ನು ಓದಿ ಮನನ ಮಾಡಿಕೊಳ್ಳಿರಿ.
3. ಉಳಿತಾಯ ಮತ್ತು ಫಿಕ್ಸೆಡ್ ಡಿಪಾಸಿಟ್ (ಸಂಚಿತ ಠೇವಣಿ) ಖಾತೆಗಳಿಗೆ ನಾಮನಿರ್ದೇಶನ ಮಾಡಿರಿ.
4. ಪರಿಪಕ್ವಗೊಳ್ಳುವ ಮುಂಚೆ ಫಿಕ್ಸೆಡ್ ಡಿಪಾಸಿಟ್ (ಸಂಚಿತ ಠೇವಣಿ)ಯಿಂದ ನಗದೀಕರಿಸಬಹುದು ಮತ್ತು ಇದರ ಮೇಲೆ ಸಾಲ ಸಹ ಪಡಕೊಳ್ಳಬಹುದು.
5. ನಿಮ್ಮ ಉಳಿತಾಯ ಬ್ಯಾಂಕ್ ಖಾತೆಯೊಂದಿಗೆ ಎಟಿಎಂ/ರುಪೇ ಕಾರ್ಡ್ ಪಡಕೊಳ್ಳಿರಿ, ಇದರಿಂದ ನಿಮ್ಮ ಹಣವನ್ನು ಸುಲಭವಾಗಿ ಪಡೆಯಬಹುದು.
6. ನಿಮ್ಮ ಎಟಿಎಂ/ರುಪೇ ಕಾರ್ಡನ್ನು ಜಾಗ್ರತೆಯಿಂದ ಬಳಸಿರಿ. ಯಾರಿಗೂ ಅದರ ನಂಬ್ರ ಮತ್ತು ಪಿನ್‌ನ್ನು ತಿಳಿಸದಿರಿ. (ಬ್ಯಾಂಕು ಅಧಿಕಾರಿಗಳಿಗೂ ಸಹ)
7. ಒಂದು ವೇಳೆ ನಿಮ್ಮ ಎಟಿಎಂ/ರುಪೇ ಕಾರ್ಡು ಕಳೆದು ಹೋದಲ್ಲಿ, ಯಾವುದೇ ಹಣ ತೆಗೆಯದೇ ನಿಮ್ಮ ಖಾತೆಗೆ ಡೆಬಿಟ್ ಆದ ಬಗ್ಗೆ ಎಸ್‌ಎಂಎಸ್ ಬಂದರೆ ತಕ್ಷಣ ಬ್ಯಾಂಕ್‌ಗೆ ಮಾಹಿತಿ ನೀಡಿರಿ.
8. ಆಗಾಗ ಉಳಿತಾಯ ಬ್ಯಾಂಕ್ ಖಾತೆಯಲ್ಲಿ ಕೆಲವು ವ್ಯವಹಾರ ಮಾಡುತ್ತಿರಿ. ನಿಮ್ಮ ಖಾತೆ ಜೀವಂತವಾಗಿರಿಸಲು ನಿಮ್ಮ ಖಾತೆಯಿಂದ ಕನಿಷ್ಠ ಒಂದು ಕ್ರೆಡಿಟ್/ಡೆಬಿಟ್ ವ್ಯವಹರಣೆ ಮಾಡತಕ್ಕದ್ದು.
9. ನಿಮ್ಮ ಬ್ಯಾಂಕ್ ಸೇವೆಯ ಬಗ್ಗೆ ಏನಾದರೂ ದೂರು ಅಥವಾ ದೂರು ನೀಡಲು ಇಚ್ಛಿಸಿದಲ್ಲಿ ಶಾಖಾ ಪ್ರಬಂಧಕರು ಅಥವಾ ಬ್ಯಾಂಕಿನ ಟಾಲ್‌ಫ್ರೀ ನಂಬ್ರ ಮುಖೇನ ನೀಡಬಹುದು.
10. ಹಿರಿಯ ನಾಗರೀಕರು/ಅಂಗವಿಕಲ ವ್ಯಕ್ತಿಗಳಿಗೆ ಏಕ ಕಿಂಡಿ ಮೂಲಕ ಬ್ಯಾಂಕು ಎಲ್ಲಾ ಸವಲತ್ತುಗಳನ್ನು ನೀಡುವುದು ಮುಖ್ಯವಾಗಿದೆ.
11. ಬ್ಯಾಂಕಿಂಗ್ ಸವಲತ್ತುಗಳು ಇಲ್ಲದ ಪ್ರದೇಶಗಳಲ್ಲಿ ಬಿಸಿನೆಸ್ ಕರೆಸ್ಪಾಂಡೆಂಟ್ ಅಥವಾ ಸೇವಾದಾರರು ನೀಡುವರು.
12. ಪಾರದರ್ಶಿಕ ರೀತಿಯಲ್ಲಿ ಬ್ಯಾಂಕುಗಳಿಂದ ಎಲ್ಲಾ ಸೇವೆಗಳನ್ನು ಪಡೆಯುವ ನಿಮ್ಮ ಹಕ್ಕಿನ ಬಗ್ಗೆ ಬ್ಯಾಂಕಿಂಗ್ ಕೋಡ್ ತಿಳಿಸುತ್ತದೆ.. ಗ್ರಾಹಕರ ಸೇವಾ ಬದ್ಧತೆಯ ಬ್ಯಾಂಕಿಂಗ್ ಕೋಡುಗಳ ಬಗ್ಗ ಅರಿವಿರತಕ್ಕದ್ದು.

---

Copyright:
This matter can be used subject to acknowledgment of the source.

Disclaimer
The purpose of this magazine is to educate customers about different banking services provided and their rights.
Readers are advised to use this information prudently.

Published first time in October 2016.

**ಬ್ಯಾಂಕಿಂಗ್ ಕೋಡ್ಸ್ ಎಂಡ್ ಸ್ಟ್ಯಾಂಡರ್ಡ್ಸ್ ಬೋರ್ಡ್ ಆಫ್ ಇಂಡಿಯಾ**

www.bcsbi.org.in